Golden Research Thoughts
ISSN 2231-5063
Impact Factor : 2.2052 (UIF)
Volume-4 | Issue-5 | Nov-2014 Available online at www.aygrt.isrj.org

# ವಿಜಾಪುರ ಜಿಲ್ಲೆಯ ನವೋದಯ ಕನ್ನಡ ಸಾಹಿತ್ಯ

**ಶ್ರೀಶೈಲ.ಬ.ಪುಜಾರಿ**
ಎಂ.ಎ
**ಜಿಲ್ಲಾ ವಿಜಾಪುರ ರಾಜ್ಯ ಕರ್ನಾಟಕ**

ವಿಜಾಪುರ ಜಿಲ್ಲೆಯ ನವೋದಯ ಕನ್ನಡ ಸಮಗ್ರ ಸಾಹಿತ್ಯವನ್ನು ಮತ್ತು ಸಾಹಿತ್ಯದಲ್ಲೂ ಅವರಿಗಿರುವ ಸ್ಥಾನವನ್ನು ಕುರಿತು ಆಲೋಚಿಸುವುದು ಅವಶ್ಯವೆನಿಸುತ್ತದೆ. ಆ ದೃಷ್ಟಿಯಿಂದ ಇಲ್ಲಿ ಸಿಂಹಾವಲೋಕನ ಕ್ರಮದಿಂದ ಆ ಕಾಲದ ಸಾಹಿತ್ಯದ ಒಲವು ನಿಲುವುಗಳನ್ನು ಸಾಧನೆ ಸಿದ್ಧಿಗಳನ್ನು ಅವಲೋಕಿಸಿ ಅದರಲ್ಲೂ ಫ.ಗು.ಹಳಕಟ್ಟಿ, ಹರ್ಡೇಕರ ಮಂಜಪ್ಪ, ಮಧುರ ಚೆನ್ನರು, ಶ್ರೀರಂಗರು, ಸಿಂಪಿ ಲಿಂಗಣ್ಣ, ರಂ.ಶ್ರೀ.ಮುಗಳಿ, ಪಿ.ಧೂಲಾ, ರೇವಪ್ಪ ಕಾಪಸೆ, ಎಚ್.ಟಿ.ಸಾಸನೂರ, ಬಿ.ಟಿ.ಸಾಸನೂರ ಕವಿಗಳ ಕೊಡುಗೆ ಎಂತಹದೆಂಬುದನ್ನು ಗುರುತಿಸಲು ಯತ್ನಿಸಲಾಗುವುದು. ಈ ಯತ್ನದಲ್ಲಿ ಈ ಕವಿಗಳ ವಿವಿಧ ಸಾಹಿತ್ಯ ಕೃಷಿಯ ಬಗ್ಗೆ ಸಾಧ್ಯವಿದ್ದಷ್ಟು ಪುನರುಕ್ತಿಯಾಗದಂತೆ ನೋಡಿಕೊಳ್ಳಲಾಗುತ್ತದೆ.
ಮೂರು ದಶಕದಷ್ಟು ಕಾಲಾವಧಿಯಲ್ಲಿ ಇವರಿಂದ ಸಾಹಿತ್ಯ ಕಾರ್ಯ ನಡೆದಿದೆ. ಈ ಕಾಲದ ಗಡುವಿನಲ್ಲಿಯೇ ಕನ್ನಡ ಸಾಹಿತ್ಯದ ನವೋದಯ ಮಾರ್ಗದ ಹುಟ್ಟು ಬೆಳವಣಿಗೆ ಸಿದ್ಧಿ ಏನೆಲ್ಲವೂ ಆಗಿದೆ. ಆದ್ದರಿಂದ ಫ.ಗು.ಹಳಕಟ್ಟಿಯುವರನ್ನು ಬಿ.ಟಿ.ಸಾಸನೂರರವರ ನವೋದಯ ಸಾಹಿತ್ಯ ಒಂದು ಭಾಗವಾಗಿ ಕಾಣುತ್ತದೆ.

ಹೊಸಗನ್ನಡ ಕಾವ್ಯದ ಪ್ರೇರಣೆ ಪರಂಪರೆ ಪ್ರಯೋಗಗಳನ್ನು ಪರಿಶೀಲಿಸಿದ ಡಾ ಜಿ.ಎಸ್.ಶಿವರುದ್ರಪ್ಪನವರು ಕನ್ನಡ ಕಾವ್ಯದ ಹರವನ್ನು ನಾವು ಸ್ಥೂಲವಾಗಿ ಮೂರು ಪಟ್ಟುಗಳಾಗಿ ವಿಭಾಗಿಸಬಹುದು. ಒಂದು ೧೯೨೦ ರಿಂದ ೧೯೪೦–೪೫ ರ ತನಕ ಬಂದ ನವೋದಯ ಕಾವ್ಯ, ಎರಡು ೧೯೪೦ ರಿಂದ ಪ್ರಗತಿಶೀಲ ಚಳುವಳಿ ಮತ್ತು ಅದರಿಂದ ಮುಂದೆ ನವ್ಯ ಕಾವ್ಯಕ್ಕೆ ಉಂಟಾದ ಪ್ರೇರಣೆ. ಮೂರು ೧೯೫೦ ರಿಂದ ಈಚೆಗೆ ಬಂದ ನವ್ಯಕಾವ್ಯವೆಂಬ ಹೊಸ ಪರಂಪರೆ ವಿವರಿಸಿದ್ದಾರೆ. ಇಲ್ಲಿ ಸೂಚಿತವಾದ ಘಟ್ಟಗಳಲ್ಲಿ ನಮಗೆ ಪ್ರಸ್ತುತವಾದ ೧೯೨೦ ರಿಂದ ೧೯೪೦ ರ ತನಕ ಬಂದ ನವೋದಯ ಕಾವ್ಯ ಎಂಬುದು ಇದು ಈ ಮೇಲಿನ ಕವಿಗಳ ಕಾವ್ಯ ಕಥೆ, ಕಾದಂಬರಿಗೆ ಅನ್ವಹಿಸುವ ಮಾತಾಗಿದೆ. ಇಲ್ಲಿಯೇ ಹೊಸಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿರುವ ಇನ್ನೊಂದು ಮಾತನ್ನು ಗಮನಿಸುವುದು ಸೂಕ್ತವಾಗಿ ತೋರುತ್ತದೆ. ಅದೆಂದರೆ ಕಾವ್ಯದಲ್ಲಿ ಸೂಚಿಸಲಾಗುವ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ, ಘಟ್ಟಗಳು ನಮ್ಮ ಸಾಹಿತ್ಯದ ಇತರ ಪ್ರಕಾರಗಳಲ್ಲಿಯೂ ಕಂಡುಬರುತ್ತಿರುವುದು. ಅಲ್ಪಕಾಲಿಕವಾದ ಅಥವಾ ನವ್ಯ ದಲಿತ ಬಂಡಾಯ ಹಿನ್ನೆಲೆಯನ್ನು ಒದಗಿಸುವಂತೆ ಬಂದ ಪ್ರಗತಿಶೀಲ ದಲಿತ ಬಂಡಾಯ, ಸಾಹಿತ್ಯವನ್ನು ಪ್ರತ್ಯೇಕವಾಗಿ ಗುರುತಿಸುವುದನ್ನು ಬಿಟ್ಟರೂ ೧೯೫೦ ರ ಕಾಲದಲ್ಲಿ ಆ ಕಾಲದ ದೃಷ್ಟಿ ಧೋರಣೆಗಳಿಗುಣವಾಗಿ ಸಾಹಿತ್ಯ ಸೃಷ್ಟಿ ಮಾಡಿದವರನ್ನು (ಯಾವುದೇ ಪ್ರಕಾರದಲ್ಲಿ)

ನವ್ಯೋದಯ ಸಾಹಿತಿಗಳೆಂದು ಈ ಅರ್ಥದಲ್ಲಿ ಶ್ರೀರಂಗ ಹರ್ಡೇಕರ ಮಂಜಪ್ಪ, ಪಿ.ಧೋಲಾ, ಶ್ರೀರಂಗರು, ಮಧುರಚೆನ್ನರು, ರಂ.ಶ್ರೀ.ಮುಗಳಿ, ಕಾಪಸೆ ರೇವಪ್ಪ, ಎಚ್.ಟಿ.ಸಾಸನೂರ, ಬಿ.ಟಿ.ಸಾಸನೂರರು ಇಂತಹ ಕವಿಗಳು ವಿಜಾಪುರ ಜಿಲ್ಲೆಯ ನವ್ಯೋದಯ ಸಾಹಿತಿಗಳಲ್ಲಿ ಪ್ರಮುಖರು ಇವರು ಕಥೆಗಾರರು ಕಾದಂಬರಿಕಾರರು, ದೇಶಪ್ರೇಮಿಗಳು, ನಾಟಕಕಾರರು, ಸಂಶೋಧಕರು, ಜನಪದರು ಅನುವಾದ ಇಂತಹ ಹಲವಾರು ಸಾಹಿತ್ಯದಲ್ಲಿ ಕಾರ್ಯ ಮಾಡಿದವರು.

೧೯೨೦ ರ ಸುಮಾರಿಗೆ ಸಾಹಿತ್ಯ ಸೃಷ್ಟಿಗೆ ತೊಡಗಲು ಹಂಬಲಿಸುತ್ತಿರುವಾಗ ನಮ್ಮ ನವ್ಯೋದಯ ಸಾಹಿತ್ಯ ಅದೆ ತಾನೇ ಕಣ್ ತೆರೆಯುವುದರಲ್ಲಿತ್ತು. ಮೈಸೂರು ಕಡೆಗೆ ಬಿ.ಎಂ.ಶ್ರೀ ಅವರೂ ಮಂಗಳೂರಿನ ಕಡೆಗೆ ಗೋವಿಂದ ಪೈಯುವರೂ ಧಾರವಾಡದ ಕಡೆಗೆ ದ.ರಾ.ಬೇಂದ್ರೆಯುವರೂ ಇನ್ನೂ ಪರಿಚಯಿಸಿಕೊಳ್ಳುವುದರಲ್ಲಿದ್ದರು. ಇಂಗ್ಲಿಷ್ ಮತ್ತು ಕನ್ನಡ ಕಾವ್ಯಗಳನ್ನು ಅಭ್ಯಸಿಸಿದ ಇವರು ನಮ್ಮ ಸಾಹಿತ್ಯಕ್ಕೆ ಹೊಸ ದೀಕ್ಷೆಯುನ್ನು ಕೊಡುವ ಯತ್ನದಲ್ಲಾದ್ದರು ಮುಂದೆ ಅಲ್ಪಾವಧಿಯಲ್ಲಿ (೧೯೨೧) ಬಿ.ಎಂ.ಶ್ರೀ ಅವರು ಸಮಕಾಲೀನರೂ ಶಿಷ್ಯರು ಇಂಗ್ಲಿಷ್ ಗೀತೆಗಳ ಮಾದರಿಯುಲ್ಲೂ ಕಾವ್ಯ ಸೃಷ್ಟಿಗೆ ತೊಡಗಿ ಬಹುಬೇಗನೆ ಕನ್ನಡ ಕಾವ್ಯಕ್ಕೆ ಹೊಸ ಕಂಪನ್ನು ತಂದುಕೊಟ್ಟರು. ಖ.ವಿ.ಸೀ, ರಾಜರತ್ನಂ, ಪು.ತಿ.ನ, ಶ್ರೀನಿವಾಸ, ಬೇಂದ್ರೆ, ದೇವುಡ, ಎ.ಆರ್.ಕೃಷ್ಣಶಾಸ್ತ್ರೀ, ಅಡಿಗರು ಇಂತಹ ಮೊದಲಾದವರು ತಮ್ಮ ತಮ್ಮ ದಾರಿಯಲೂ ಮುಂದುವರೆದು ನವ್ಯೋದಯ ಕಾವ್ಯವು ಸಮೃದ್ಧವಾಗಿ ಬೆಳೆಯುವಂತೆ ಯತ್ನಿಸಿದರು. ಮೈಸೂರಿನ ಕಡೆಗೆ ಹೀಗೆ ಬೆಳವಣಿಗೆ ನಡೆದರೆ ಧಾರವಾಡದ ಕಡೆಗೆ ಬೇಂದ್ರೆಯುವರ ಹಿರಿತನದಲ್ಲಿ ಗೆಳೆಯರ ಗುಂಪು ರೂಪುಗೊಂಡು ಅದು ಮಧುರಚೆನ್ನ, ಆನಂದಕಂದ, ವಿನಾಯಕ, ಶ್ರೀರಂಗ, ಸಿಂಪಿಲಿಂಗಣ್ಣ, ರಂ.ಶ್ರೀ.ಮುಗಳಿ, ಹರ್ಡೇಕರ ಮಂಜಪ್ಪ , ಪಿ.ಧೋಲಾ ಮೊದಲಾದವರು ನವ್ಯೋದಯ ಕವಿಗಳಿಗೆ ಸ್ಫೂರ್ತಿ ಪ್ರೇರಣೆಯುನ್ನು ನೀಡಿತು.

ನವ್ಯೋದಯ ಕಾಲದ ಆರಂಭದಲ್ಲಿ ಸಾಮಾನ್ಯವಾಗಿ ಎಲ್ಲ ಕಡೆಯ ಒಲವು ಒಂದೇ ರೀತಿಯಾಗಿತ್ತೆಂದು ಕಾಣುತ್ತದೆ. ಈ ವಿಷಯುವನ್ನು ಕುರಿತು ಆಲೋಚಿಸಿದ ಎಸ್.ಅನಂತನಾರಾಯಣರು "ಈ ಕಾಲದ ಸಮಸ್ಯೆಗಳು ಎಲ್ಲ ಕಡೆಯಲ್ಲಿಯೂ ಒಂದೇ ತರಹವಾಗಿದ್ದುವೆಂದು ಹೇಳಬಹುದು; ಹೊಸ ಛಂದಸ್ಸಿನ ಪ್ರಯೋಗದ ಸಾಧ್ಯಾ ಸಾಧ್ಯತೆ ಹೊಸ ರೀತಿಯು ಭಾವಗಳನ್ನು ಅಬಿವ್ಯಕ್ತಗೊಳಿಸುವುದು ಹೊಸ ಭಾಷೆಯು ಪ್ರಯೋಗ ಮತ್ತು ಹೊಸ ಶೈಲಿ, ಪ್ರಾಸ ಮುಂತಾದವುಗಳ ವಿಚಾರ–ಇವೇ ಎಲ್ಲ ಕಡೆಯಲ್ಲಿಯೂ ಎದ್ದು ನಿಂತ ಸಮಸ್ಯೆಗಳು" ಎಂದಿದ್ದಾರೆ. ಈ ಸಮಸ್ಯೆಗಳಿಗೆ; ಪರಿಹಾರ ನೀಡಿದ್ದು 'ಇಂಗ್ಲಿಷ್ ಗೀತೆಗಳು' ಎಂದೇ ಹೇಳಬಹುದು. ಆ ವರೆಗೆ ಹಳೆಯ ಛಂದಸ್ಸಿನಲ್ಲಿಯೇ ಹೊಸ ಭಾವಗಳನ್ನು ಅಭಿವ್ಯಕ್ತಪಡಿಸುತ್ತಿದ್ದ ಕವಿಗಳು ಅನಂತರ ಹೊಸ ರೀತಿಯಲ್ಲಿ ಬರೆಯಲು ಪ್ರಾರಂಭಿಸಿದ್ದು ಕಂಡುಬರುತ್ತದೆ. ಈ ಶತಮಾನದ ಮೂರನೆಯ ದಶಕದಲ್ಲಿ ಕಾವ್ಯ ಸೃಷ್ಟಿಯಲ್ಲಿ ತೊಡಗಿದ ಎಲ್ಲ ಕವಿಗಳು ಛಂದಸ್ಸಿನಲ್ಲಿ ಹೊಸ ರೀತಿಯುನ್ನು ಅನುಸರಿಸಿದ್ದುದನ್ನು ಕಾಣಬಹುದು. ಮೊದಮೊದಲಿಗೆ ನಮ್ಮ ಕವಿಗಳು ಷಟ್ಪದಿಯುನ್ನು, ರಗಳೆಯುನ್ನು ಹಿಗ್ಗಿಸುವ ಇಲ್ಲವೇ ಕುಗ್ಗಿಸುವ ಕಾರ್ಯ ಮಾಡಿದಂತೆ ಕಂಡರೂ ಮುಂದೆ ಮುಂದೆ ಆದಿಪ್ರಾಸ ಬಿಟ್ಟುಕೊಡುವುದರಲ್ಲಿ ಅನುಕೂಲಿಸಿದಂತೆ ಗಣವಿಂಗಡನೆ ಮಾಡಿಕೊಳ್ಳುವುದರಲ್ಲಿ ಭಾವಕ್ಕೆ ತಕ್ಕ ಛಂದಸ್ಸನ್ನು ನಿರ್ಮಿಸಿಕೊಳ್ಳುವುದರಲ್ಲಿ ಹೆಚ್ಚು ಸ್ವಾತಂತ್ರ್ಯ ವಹಿಸುತ್ತ ಸಾಗಿದ್ದುದು ಸ್ಪಷ್ಟವಾಗಿ ಕಂಡುಬರುತ್ತದೆ. ಕುವೆಂಪುಯುವರ 'ಕೊಳಲು' ೧೯೩೦, ಬೇಂದ್ರೆಯುವರ 'ಗರಿ' ೧೯೩೩ ಇವು ಪ್ರಕಟವಾಗುವ ಹೊತ್ತಿಗೆ ಕನ್ನಡ ಕಾವ್ಯದ ಛಂದಸ್ಸಿಗೆ ಒಂದು ನಾವೀನ್ಯತೆ ಬಂದುಬಿಟ್ಟಿತ್ತು.

Golden Research Thoughts
ISSN 2231-5063
Impact Factor : 2.2052 (UIF)
Volume-4 | Issue-5 | Nov-2014 Available online at www.aygrt.isrj.org

ಹೀಗೆ ಛಂದಸ್ಸಿಗೆ ನಾವೀನ್ಯತೆಯನ್ನು ಪಡೆದ ನವ್ಯೋದಯ ಕಾವ್ಯ ವಿವಿಧ ವಿನ್ಯಾಸಗಳಿಂದ ೧೯೫೦ ರವರೆಗೆ ಹಾಗೂ ಸ್ವಲ್ಪ ಮುಂದಕ್ಕೆ ಬೆಳೆಯಿತು. ನವ್ಯೋದಯ ಕಾವ್ಯ ಭಾವಗೀತೆ ಪ್ರಕಾರವಾಗಿದೆ; ಅಥವಾ ನವ್ಯೋದಯ ಕಾವ್ಯವೆಂದರೆ ಭಾವಗೀತೆ ಪ್ರಕಾರದ ಕಾವ್ಯವೇ ಎಂದು ಹೇಳಬೇಕು. ಸುನೀತ, ಸೀಸಪದ್ಯ, ಹಾಡು ಮುಂತಾದವುಗಳು ಈ ಪ್ರಕಾರದಲ್ಲಿಯೇ ಕಾಣಿಸಿಕೊಂಡ ಪ್ರಭೇದಗಳಾಗಿವೆ. ಅವುಗಳ ಮೂಲಕ ಛಂದೋವೈವಿಧ್ಯ ಮತ್ತು ವಸ್ತು ವೈವಿಧ್ಯವನ್ನು ಸಾಧಿಸಲು ತುಂಬಾ ಪ್ರಯೋಜನವಾಗಿದೆ.

**ಪ್ರೇರಣೆ ಪ್ರಭಾವ** :

ನವ್ಯೋದಯ ಪ್ರಾರಂಭವಾದದ್ದು ಈ ದೇಶಕ್ಕೆ ಪಾಶ್ಚಾತ್ಯರ ಪ್ರಭಾವದಿಂದ ಭಾರತಕ್ಕೆ ಪಾಶ್ಚಾತ್ಯರ ಪ್ರಜಾಪ್ರಭುತ್ವದ ಕಲ್ಪನೆಗಳು ವಿಜ್ಞಾನ, ತಂತ್ರಜ್ಞಾನ ಎಲ್ಲ ಒಟ್ಟಿಗೆ ಲಭ್ಯವಾದವು. ಭಾರತ ಆಧುನಿಕ ಜಗತ್ತಿಗೆ ಜಿಗಿಯಬೇಕಾಗಿತ್ತು. ಇಂತಹ ಸಂದರ್ಭದಲ್ಲಿ ನವ್ಯೋದಯ ಸಾಹಿತ್ಯ ಜನಿಸಿತ್ತು. ಈ ಸಾಹಿತ್ಯವು ಪಾಶ್ಚಾತ್ಯರ ದೇಶದಲ್ಲಿ 'ರೋಮ್ಯಾಂಟಿಕ್' ಸಾಹಿತ್ಯ ಎಂದು ಕರೆದರು. ಮತ್ತು ಇಂಗ್ಲಿಷ್ ಭಾಷೆಯಲ್ಲಿ ರೋಮ್ಯಾಂಟಿಕ್ ಸಾಹಿತ್ಯದ ಒಂದು ಲಕ್ಷಣ ಕನ್ನಡ, ನವ್ಯೋದಯ ಸಾಹಿತ್ಯದಲ್ಲಿಯೇ ಕಂಡಿತ್ತು. ಈ ನವ್ಯೋದಯ ಕನ್ನಡ ಸಾಹಿತ್ಯಕ್ಕೆ ಇಂತ ಹಿನ್ನೆಲೆ ಇರಲಿಲ್ಲ. ಆದರೆ ರೋಮ್ಯಾಂಟಿಕ್ ಸಾಹಿತ್ಯದ ಭಾಗವಾಗಿ ಈ ದೃಷ್ಟಿ ನವ್ಯೋದಯ ಸಾಹಿತಿಗಳಿಗೆ ಬಂದಿತ್ತು.

ಕನ್ನಡ ಸಾಹಿತ್ಯಕ್ಕೆ 'ಶ್ರೀ' ಅವರಲ್ಲಿ (ಪ್ರೊ.ಬಿ.ಎಂ.ಶ್ರೀಕಂಠಯ್ಯ) ಅಂತಹ ಶಿಲ್ಪಿ ದೊರೆತಂತಾಯಿತು. 'ಶ್ರೀ' ಯವರ 'ಇಂಗ್ಲಿಷ್ ಗೀತ' ಗಳಿಂದ ಸಾಮಾನ್ಯವಾಗಿ 'ರೋಮ್ಯಾಂಟಿಕ್' ಎಂದು ಕರೆಯುವ ನವ್ಯೋದಯ ಯುಗ ಪ್ರಾರಂಭವಾಯಿತು. 'ನವ್ಯೋದಯ' ಎನ್ನುವ ಹೆಸರು ಕೂಡ, ಆಮೇಲೆ 'ರೋಮ್ಯಾಂಟಿಕ್' ಎಂಬ ಪದಕ್ಕೆ ಪರ್ಯಾಯವಾಗಿ ಬಂತು ಎಲ್ಲ ಕವಿಗಳು ಕನ್ನಡ ಬಾವುಟವನ್ನು 'ಶ್ರೀ'ಯವರಿಂದ ಹಿಡಿದು ನವ್ಯೋದಯದ ಸೃಜನ ಸಾಹಿತಿಗಳು ವಿಮರ್ಶಕರಲ್ಲಿ ಪಂಪನಿಂದ ಪಂಜೆಯವರವರೆಗೆ ತಮ್ಮ ಹಿಂದಿನ ಅತಿರಥ ಮಹಾರಥರಿಗೆ ನಮಿಸಿ ಮುಂದೆ ಹೆಜ್ಜೆ ಇಟ್ಟವರು ಮತ್ತು ಕನ್ನಡದಲ್ಲಿ ಸಾಹಿತ್ಯ ವಿಮರ್ಶೆ ಬೆಳೆದದ್ದು ನವ್ಯೋದಯ ಕಾಲದಲ್ಲಿಯೇ ಎನ್ನಬೇಕು.

**ನವ್ಯೋದಯದ ಸಮೃದ್ಧಿ** :

೧೯೩೦ ರಿಂದ ೧೯೪೫ ರ ವರೆಗೆ ನವ್ಯೋದಯದ ಸಂಭ್ರಮದ ಸುಗ್ಗಿಯ ಕಾಲ ಎನ್ನಬೇಕು. ಹೀಗೆಂದರೆ ಇದರ ನಂತರ ನವ್ಯೋದಯದ ಸಾಹಿತಿಗಳು ಬರೆಯಲಿಲ್ಲ ಎಂದಾಗಲಿ ಆ ಕಾಲದ ಚೇತನ ಬೇರೆಯುವರ ಕೃತಿಗಳಲ್ಲಿ ಪ್ರಕಟವಾಗಲಿಲ್ಲ ಎಂದಾಗಲಿ ಅರ್ಥವಲ್ಲ. ಶ್ರೀನಿವಾಸರ ಎರಡು ಕಾದಂಬರಿಗಳು, ಬೇಂದ್ರೆಯವರ ನೂರಾರು ಕವನಗಳು, ಕಾರಂತರ ಅಳಿದ ಮೇಲೆ ಕುಡಿಯರ ಕೂಸು, ಸರಸಮ್ಮನ ಸಮಾಧಿ ಕುವೆಂಪು ಅವರ ರಾಮಾಯಣ ದರ್ಶನ, ಮಲೆಗಳಲ್ಲಿ ಮದುಮಗಳು ಪು.ತಿ.ನ ಅವರ ಗೋಕುಲ ನಿರ್ಗಮನ, ವಿನಾಯಕರ 'ಸಮರಸವೇ ಜೀವನ' ಎಲ್ಲ ಪ್ರಕಟವಾದದ್ದು ೧೯೪೫ ರ ನಂತರ ನಂತರವೂ ಸಾಗಿತು. ಆನಂದರ ಅಶ್ವತ್ಥ, ಪವತವಾಣಿ ಇವರಿಂದ ಪ್ರಾರಂಭಿಸಿ ವ್ಯಾಸರಾಯ ಬಲ್ಲಾಳ, ರಂಗನಾಥ ಯಕ್ಕುಂಡಿಯವರವರೆಗೆ ೧೯೪೫ ನಂತರವೇ ಸಾಹಿತ್ಯಕ್ಕೆ ಕಾಲಿಟ್ಟವರು. ನವ್ಯೋದಯದ ಸಂಪ್ರದಾಯವನ್ನೇ ಮುಂದುವರೆಸಿದರು ಎನ್ನಬಹುದು.

Golden Research Thoughts
ISSN 2231-5063
Impact Factor : 2.2052 (UIF)
Volume-4 | Issue-5 | Nov-2014 Available online at www.aygrt.isrj.org

ಒಟ್ಟಾರೆಯಾಗಿ ಕನ್ನಡದ ಈ ನವ್ಯೋದಯ ಕಾವ್ಯ ಮೂವತ್ತು ವರುಷಗಳ (೧೯೨೦–೫೦) ಕಾಲಾವಧಿಯಲ್ಲಿ ಮಾಡಿದ ಕಾರ್ಯ ನಿಜವಾಗಿಯೂ ಹೆಮ್ಮೆಪಡುವಂತಹದು. ಚಿಕ್ಕದೇವರಾಯನ ಕಾಲದ ನಂತರ ಕಳೆಗುಂದಿದ್ದ ಕನ್ನಡ ಪರಂಪರೆ ಮತ್ತೆ ನವ್ಯೋನುವಾಗಿ, ಕಾಂತಿಯುತವಾಗಿ, ಮೆರೆದದ್ದು ಈ ಕಾಲದಲ್ಲಿಯೇ ಭಾವಗೀತದಂತಹ ಸಂವೇದನೆ ಬಾದಾಮಿಯ ಶಾಸನ ಮತ್ತು ಪಂಪನ ಬನವಾಸಿಯ ವರ್ಣನೆಯ ಪದ್ಯಗಳಾದಿಯಾಗಿ ವಚನಕಾರರ ವಚನಗಳಲ್ಲಿ ತ್ರಿಪದಿಗಳಲ್ಲಿ ಜಾನಪದ ಸಾಹಿತ್ಯದಲ್ಲಿ ಹೀಗೆ ಅನೇಕ ಕಡೆ ಸುಳಿದಾಡುತಿದ್ದರೂ ಅದಕ್ಕೊಂದು ನಿಶ್ಚಿತ ಸ್ವರೂಪ ಬಂದದ್ದು ಈಗಲೇ ಎಂಬುದರಲ್ಲಿ ಸಂಶಯವಿಲ್ಲ. ಈ ಸತ್ವವನ್ನು ಪಡೆದ ಈ ಕಾವ್ಯ ಹೊಸಗನ್ನಡ ಸಾಹಿತ್ಯದ ಬಹೊದೊಡ್ಡ ಸಂಪತ್ತಾಗಿದೆ.

**ಉದ್ದೇಶ ಮತ್ತು ಅಗತ್ಯ :**

ಈ ಸಂಪತ್ತಿನ ಹೆಚ್ಚಳಕ್ಕೆ ವಿಜಾಪುರ ಜಿಲ್ಲೆಯ ನವ್ಯೋದಯ ಸಾಹಿತ್ಯಕ್ಕೆ ಕಾರಣರಾದವರಲ್ಲಿ ಫ.ಗು.ಹಳಕಟ್ಟಿ, ಹರ್ಡೇಕರ ಮಂಜಪ್ಪ, ಮಧುರಚೆನ್ನರು, ಶ್ರೀರಂಗರು, ಸಿಂಪಿಲಿಂಗಣ್ಣ, ರಂ.ಶ್ರೀ.ಮುಗಳಿ, ರೇವಪ್ಪ ಕಾಪಸೆ, ಪಿ.ಧೂಲಾ, ಎಚ್.ಟಿ.ಸಾಸನೂರ ಮತ್ತು ಬಿ.ಟಿ.ಸಾಸನೂರ ಇಂತಹ ಕವಿಗಳ ಅವರ ಕಾವ್ಯ ರಚನೆಯ ಕಾಲಾವಧಿ ಮತ್ತು ಘಟ್ಟಗಳ ವೈಶಿಷ್ಟ್ಯಗಳು ಮುಂತಾದವುಗಳನ್ನು ಇವರ ಸಾಹಿತ್ಯದಲ್ಲಿ ಚರ್ಚಿಸಲಾಗಿದೆ. ಫ.ಗು.ಹಳಕಟ್ಟಿಯವರು ಸಮಾಜ ಸೇವಾಕರ್ತರು ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ವೃದ್ಧಿಯಾಗಿ ಶ್ರಮಿಸಿದವರು. ಶಿವಾನುಭವ, ನವಕರ್ನಾಟಕ ಪತ್ರಿಕೆಯ ಮಾಲಿಕರು, ಸಂಪಾದಕರು ಆಗಿದ್ದವರು. ಫ.ಗು.ಹಳಕಟ್ಟಿಯವರು ವಚನ ಪಿತಾಮಹ ಎಂದು ಖ್ಯಾತಿಯಾಗಿದ್ದರು. ನಂತರ ಹರ್ಡೇಕರ ಮಂಜಪ್ಪನವರು ಕರ್ನಾಟಕ ಗಾಂದಿ ಎಂದು ಹೆಸರಾದರು. ಇವರು ಅಕ್ಕನ ಉಪದೇಶ, ಅಣ್ಣನ ಕ್ರಾಂತಿ, ಅಪರ್ಣಾಯೋಗ, ಅಪ್ಪಾಸಹೇಬ ವಾರದ ೬೩ ಪುರಾತನರ ಚರಿತ್ರೆ, ಅಹಿಂಸೆ, ಆಧುನಿಕ ಜರ್ಮನಿ, ಆರೋಗ್ಯ ಜೀವನ, ಆರ್ಯತೇಜ, ಋಗ್ವೇದಸಾರ, ಎಚ್ಚೇತ್ತ ಹಿಂದುಸ್ಥಾನ, ಏಕಲವ್ಯ, ಕಚಿದೇವನ ಕಥೆ, ಕನ್ನಡ ಒಂದನೆಯ ಪುಸ್ತಕದ ಶಬ್ದಾರ್ಥ, ಕಾಯಕವೇ ಕೈಲಾಸ, ಗಾಂಧಿ ಸಂದೇಶ, ಗ್ರಹ ಶಿಕ್ಷಣ, ಕಾದಿಶಾಸ್ತ್ರ, ಚನ್ನಬಸವಣ್ಣನವರ ಉಪದೇಶ, ಜನಸೇವಕನ ವಚನಗಳು, ಬಸವಣ್ಣನವರ ಚರಿತ್ರೆ, ಬಕ್ತಿಯ ಬೆಳಕು, ಭಗವಾನ ಬುದ್ಧನ ಚರಿತ್ರೆ, ಮಹತ್ಮಾ ಗಾಂಧಿಯವರ ಚರಿತ್ರೆ, ಲಿಂಗರಾಜರ ಚರಿತ್ರೆ, ಸಿದ್ಧರಾಮ ಶಿವಯೋಗಿಗಳ ಚರಿತ್ರೆ, ಶರಣಬಸವೇಶ್ವರ ಚರಿತ್ರೆ ಹಾಗೆ ಇವರ ನಡೆಸಿದ ಪತ್ರರಿಕೆಗಳು ಧನುರ್ಧಾರಿ ವಾರ ಪತ್ರಿಕೆ, ಕಾದೀವಿಜಯ ಮಾಸಪತ್ರಿಕೆ, ಉದ್ಯೋಗ ಮಾಸಪತ್ರಿಕೆ, ವಿದ್ಯಾಲಯ ಪತ್ರಿಕೆ, ಬಾಲಸಂಗಯ್ಯ ಪತ್ರಿಕೆ ಹಾಗು ಕೃತಿಗಳನ್ನು ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡಿದವರು.

ಮಧುರಚೆನ್ನರ ಪೂರ್ವರಂಗ, ಕಾಳರಾತ್ರಿ, ಬೆಳಗು, ಪೂರ್ಣಯೋಗದ ಪಥದಲ್ಲಿ,ಅರವಿಂದರ ಯೋಗವಿಚಾರ, ವಿನೋದ ಕುಸುಮಾಳ, ಕನ್ನಡಿಗರ ಕುಲಗುರು, ಸಿಂಪಿಯವರೊಡನೆ ಮತ್ತು ಅನುವಾದಿತ ಕೃತಿ, ವಿಸರ್ಜನ, ಪೂರ್ಣಯೋಗ ಮಾತೃವಾಣಿ, ಮದರದ ಅರ್ಧಭಾಗ, ಬಾಳಿನಲ್ಲಿ ಬೆಳಕು, ಧರ್ಮಕ್ಷೇತ್ರ ಕುರುಕ್ಷೇತ್ರ, ವಿಚಾರಗಳು ಹಾಗೂ ಜನಪದ ಸಾಹಿತ್ಯದಲ್ಲಿ ಗರತಿಯ ಹಾಡು ಜನಪದ ಹಾಡುಗಳ ಸಂಗ್ರಹ, ರೇವಪ್ಪ ಲಿಂಗಪ್ಪರೊಡನೆ ಸಿಂಪಿ ಲಿಂಗಣ್ಣನವರ ಸಾವಿನ ಸಮಸ್ಯೆ, ಭಾರತೀಯ ಮಹಾಪುರುಷರ ಚರಿತ್ರೆ, ಮಿಲನ ಪ್ರೇಮಕಾವ್ಯ, ವಿಶ್ವಾಮಿತ್ರನ ಸಾಹಸ ಚರಿತ್ರೆ, ಬೆಟ್ಟದ ಹೊಳೆ ಕಾದಂಬರಿ, ಮುಗಿಲಜೇನು, ಕವನಗಳು, ಗರತೀಯಬಾಳು, ಶ್ರೀ ಅರವಿಂದರ ಪತ್ರಗಳು ಇಂಥ ಕೃತಿಗಳಿಂದ ಸಿಂಪಿಯವರು ಸಾಹಿತ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

ಶ್ರೀರಂಗರು ನಾಟಕ ಸಾಹಿತ್ಯದಲ್ಲಿ ತಮ್ಮ ಕೃಷಿಯುನ್ನು ಮಾಡಿದ್ದಾರೆ. ಹಾಗೆ ಕಾದಂಬರಿ, ಚರಿತ್ರೆ ಗ್ರಂಥಗಳು, ಕಾವ್ಯವಿಮರ್ಶೆ ಇನ್ನಿತರ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಇವರ ದರಿದ್ರ ನಾರಾಯಣ, ಮುಕ್ಕಣ್ಣ, ವಿರಾಟ ಪುರುಷ, ಧರ್ಮವಿಜಯ, ಹರಿಜನವಾರ, ನರಕದಲ್ಲಿ ನರಸಿಂಹ, ಕರ್ತಾರನ ಕಮ್ಮಟ, ಶೋಕಚಕ್ರ, ಜೀವನ ಜೋಕಾಲಿ, ಕೇಳುಜನಮೇಜಯ, ಈಸಬೇಕು ಇದ್ದು ಜಯಿಸಬೇಕು, ಅಗ್ನಿಸಾಕ್ಷಿ ಇಂಥನಾಟಕಗಳಲ್ಲದೇ ಕಾದಂಬರಿಗಳನ್ನು ಬರೆದವರು. ವಿಶ್ವಾಮಿತ್ರನ ಸೃಷ್ಟಿ, ಬರಮಪ್ಪನ ಬೂತ, ಕುಮಾರ ಸಂಭವ, ಅನಾಧಿ ಅನಂತ, ಗೌತಮನ ಶಾಪ, ವಿಷಚಕ್ರವ್ಯೂಹ್ಯ, ನನ್ನ ನಾಟ್ಯ ನೆನಪುಗಳು ನಮ್ಮ ನೆಚ್ಚಿನ ನೆಹರು ಚರಿತ್ರೆಗಳಾದ ಅಹ್ವಾನ ಕಾವ್ಯ ಕಾಳಿದಾಸ, ಕವಿಕುಲಗುರು ಕಾಳಿದಾಸ, ವಿಮರ್ಶೆಗಳು ಮತ್ತು ನಾಟ್ಯ ಗ್ರಂಥಗಳಾದ ನಾಟ್ಯದರ್ಪಣ, ರಂಗನಾಟಕ ಶಾಸ್ತ್ರ, ಬರತ ನಾಟ್ಯಶಾಸ್ತ್ರ, ಒಂದು ವಿವೇಚನಾತ್ಮಕ ಗ್ರಂಥ, ಭಾಷಾ ಶಾಸ್ತ್ರ, ಇತರೆ ಇಂಗ್ಲಿಷ್ ಬರವಣಿಗೆ ಅನಿವಾಧಿತ ಗ್ರಂಥಗಳು, ಅನುವಾದಿತ ಮಹಾಕೃತಿ ಇಂಥ ಸಾಹಿತ್ಯ ಕೈಕೊಂಡಿದ್ದಾರೆ.

ರಂ.ಶ್ರೀ. ಮುಗಳಿಯುವರ ಕಾವ್ಯ ಬಾಸಿಗ, ಅಪಾರ ಕರುಣೆ, ಓಂ ಅಶಾಂತಿ, ನಿತ್ಯನಿರಂತರ, ನವಮಾನವ ಸಣ್ಣಕಥೆ ಕನಸಿನ ಕೆಳದಿ, ಕಾದಂಬರಿ ಬಾಳೂರಿ, ಕಾರಣ ಪುರುಷ, ಅಗ್ನಿವರ್ಣ, ಅನ್ನ ಇಂಥ ಕಾದಂಬರಿ ಬರೆದವರು. ಹಾಗೆ ನಾಟಕದಲ್ಲಿ ಕೂಡ ಅಕ್ಕ ಮಹಾದೇವಿ, ಪಾವನ ಪಾವಕ, ನಾಮದಾರಿ, ವಿಜಯು ಸಾಮ್ರಾಜ್ಯ, ದನಂಜಯು ಇವರ ಜೀವನ ಚರಿತ್ರೆ ಅರವಿಂದ ಮಕರಂದ, ಶಾಂತಕವಿ, ಜೀವನ ರಸಿಕ, ಮತ್ತು ಸಮಪಾದಿತ ಕೃತಿ ಕನ್ನಡ ಕಾವ್ಯ ಸಂಚಯು, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಒಂದು, ಕನ್ನಡ ಸಾಹಿತ್ಯ ಚರಿತ್ರೆ, ಇವರ ಕನ್ನಡ ಸಾಹಿತ್ಯ ಇತಿಹಾಸ, ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು ಸಾಹಿತ್ಯ ವಿಮರ್ಶೆ ರನ್ನನ ಕೃತಿರತ್ನ, ಸಾಹಿತ್ಯತ್ಯೋಪಾಸನೆ, ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯು ದರ್ಶನ, ವಿಮರ್ಶೆಯು ವ್ರತ, ಬೇಂದ್ರೆ ವ್ರತ, ಬೇಂದ್ರೆ ಕಾವ್ಯ ಮಾಡಿದವರು ಹಾಗೂ ಲಘು ನಿಬಂಧ, ಇಂಗ್ಲಿಷ್ ಕೃತಿಗಳು ಬರೆದು ಸಾಹಿತ್ಯ ಕ್ಷೇತ್ರದಲ್ಲಿ ಖ್ಯಾತಿಯುನ್ನು ಕಂಡವರು.

ಜನಪದ ಸಾಹಿತ್ಯ ಕ್ಷೇತ್ರದ ಹಲಸಂಗಿ ಗೆಳೆಯುರ ಬಳಗದಿಂದ ಬಂದ ಪಿ.ಧೂಲಾರವರ 'ಮೊಗ್ಗು' ಎಂಬ ಕೈಬರಹದ ಪತ್ರಿಕೆ ಲಾವಣಿಗಳು ಕವಿಕರ್ಣ ಇವರ ಕಾವ್ಯ ಸೃಷ್ಟುಸಿ ಜಯು ಕರ್ನಾಟಕದವರೆಗೂ ಹಬ್ಬಿತು. ನಾಟಕ ಸಂಘವನ್ನು ಕಟ್ಟಿಕೊಂಡವರು. ಅವರ ಒಂದೇ ಒಂದಾದ ಸ್ವತಂತ್ರ ಕೃತಿ 'ವೀರ ಪಥಿಕ' ಇದು ಕವನ ಸಂಗ್ರಹ ಅದರಲ್ಲಿ ಹನ್ನೊಂದು ಕವಿತೆಗಳಿವೆ, ಅದರಲ್ಲಿಯು ಅರಬಿಯುದ ಅಭಿಮನ್ಯ, ಒಂದು ಖಂಡಕಾವ್ಯ ಎಂದು ಹೇಳಬಹುದು. "ಜೀವನ ಸಂಗೀತ ಎಂಬ ಲಾವಣಿ ಸಂಗ್ರಹ" ಕಂಡುಕೊಂಡಿದ್ದಾರೆ. ಇವರ ನಂತರ ಬಂದ 'ಕಾಪಸೆ ರೇವಪ್ಪ ಇವರು ಹಲಸಂಗಿ ಗೆಳೆಯುರ ಬಳಗದಲ್ಲಿ ಎಲ್ಲರಿಗಿಂತ ಚಿಕ್ಕವರು. ಇವರು ಮೂರುವರೆ ದಶಕಗಳ ತಮ್ಮ ಅಲ್ಪಾಯುಷ್ಯದಲ್ಲಿ ಮತ್ತು ಅನುಪಮ, ಮಲ್ಲಿಗೆದಂಡೆ, ಎಂಬ ಜಾನಪದ ಹಾಡುಗಳ ಸಂಗ್ರಹದ ಮೂಲಕ ಅವರಿಗೆ ಕನ್ನಡ ಸಾಹಿತ್ಯೇತಿಹಾಸದಲ್ಲಿ ಒಂದು ಮಹತ್ವದ ಸ್ಥಾನ ಮೀಸಲಾಗಿದೆ. ಇವರ 'ನಂದನವನ' ಕಥಾ ಸಂಗ್ರಹ ಹೀಗೆ ರೇವಪ್ಪನವರು ಬಾಲ ಕವಿ ಕಾಪಸೆ ಎಂದೇ ಹೆಸರುವಾಸಿಯಾದವರು ರೇವಪ್ಪ ಗೆಳೆಯುರ ಗುಂಪಿನ ಮಹತ್ವದ ವ್ಯಕ್ತಿಯಾಗಿದ್ದರು. ನಂತರ ಸಾಸನೂರವರು ಕೂಡಾ ಸಾಹಿತ್ಯ ಕ್ಷೇತ್ರದ ಕಡೆ ತಿರುಗಿದರೆ, ಎಚ್.ಟಿ. ಮತ್ತು ಬಿ.ಟಿ ಸಾಸನೂರವರು ಕೂಡ ವಿಜಾಪುರ ಜಿಲ್ಲೆಯುಲ್ಲಿ ಸಾಹಿತ್ಯ ಕ್ಷೇತ್ರ ಶ್ರೀಮಂತಗೊಳಿಸಿದವರು. ಇವರ ಕಾವ್ಯ ಕಥೆ ಕಾದಂಬರಿ ಲೇಖನಗಳ ಮೂಲಕ ನವೋದಯ ಸಾಹಿತ್ಯದ ಶ್ರೇಷ್ಠ ವ್ಯಕ್ತಿಯಾದವರು.

**ಕೊಡುಗೆ :**

ನವ್ಯೋದಯ ಸಾಹಿತ್ಯಕ್ಕೆ ವಿಜಾಪುರ ಜಿಲ್ಲೆಯು ಕೂಡಾ ಕರ್ನಾಟಕಕ್ಕೆ ಸಮನಾದ ಸಾಹಿತ್ಯ ಎಂದು ಹೇಳಬಹುದು ಮತ್ತು ನವ್ಯೋದಯ ಸಾಹಿತ್ಯದಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುವ ಕವಿಗಳು ಇವರು. ಕಥೆಗಾರರು, ಕಾದಂಬರಿಕಾರರು, ನಾಟಕಕಾರರರು, ಸಂಶೋಧಕರು, ವಿಮರ್ಶಕರು, ಆಧ್ಯಾತ್ಮಕಾರರು, ಜನಪದರು ಇಂತಹ ಎಲ್ಲ ಸಾಹಿತ್ಯ ಕ್ಷೇತ್ರದಲ್ಲಿ ಶ್ರೀಮಂತಗೊಳಿಸಿ ವಿಜಾಪುರ ಜಿಲ್ಲೆಯು ನವ್ಯೋದಯ ಸಾಹಿತ್ಯಕ್ಕೆ ಹೊಸ ಬೆಳಕು ತಂದುಕೊಟ್ಟ ಶ್ರೇಷ್ಠ ಅನುಭವಿ ಕವಿಗಳು. ವಿಜಾಪುರ ಜಿಲ್ಲೆಯ ನವ್ಯೋದಯ ಸಾಹಿತಿಗಳ ಕೊಡುಗೆ ಅವಿಸ್ಮರಣೀಯವಾದುದ್ದು.

## REFERENCES:

೧. DªÄÆg f. J¸ï: P£ßq ¸Á»vå PÁzA§j, ²æÃªÀj ¥ÀæPÁ±À£À zÁgªÁq: 1994.
2. zÃ¸Á¬Ä ±ÁAw£Áx: P£ßq PÁzA§j £qzÀ §Az jÃw, ¥ÀæÁgÁAU P£Áð l P «.«. zÁgªÁq-1989
3. ¨¼U° zÄ.¤A: P£ßqz° PÁzA§j ¸Á»vå, P£Áð l P «±«zÁå®AiÄ zÁgªÁq: 1975
4. «dAiiÁ z¨: ªÄ»¼, ¸Á»vå, ¸ªiÁd gZ£Á ¥ÀæPÁ±À£, ªÄÊ¸ÆgÄ : 1989
5. ²æÃ©gÁzÁg ±A.UÄ : (¥ÀæA) f¯Á P£ßq ¸Á»vå ¥jµvÄ «eÁ¥Äg : 1982
6. ¸§gz «dAiÄ²æÃ: C£Ä¥ªiÁ ¤gAd£ Cªg PÁzA§jU¼Ä: MAzÄ ¸Á»vå CzåAiÄ£, r.«.P ªÄÆwð ªÄÊ¸ÆgÄ: 1994
7. ²æÃ¥ÆeÁj.º.ªÄ: (¸A) ¨½ ¨¼Q£ atg ZÃv£ «zÁåZÃv£ ¥ÀæPÁ±À£ ¹AzV: 2002
1. ²æÃPAZÁåt ±gt¥: (¥ÀæA) ©gÁzÁg ±A.UÄ C©£Az£ UæAx- ºÆ«£ ºAzg
2. ¥Ææ»¥gV.J.J¸ï: (UË.¸A) ºÄqÄPÄ ¢Ã¥ ¸ägt ¸A¥Äl : f¯Á 10£AiÄ P£ßq ¸Á»vå ¸ªÄÃ¼£, «eÁ¥Äg, vjv ªÄÄzÀæÁ®AiÄ UzU : 2006
3. ¥Ææ¥gV.J.J¸ï:aAvÁªÄt F±gZAzæ©£Az£UæAx vjv ªÄÄzÀæÁ®AiÄ UzU : 2005